ಅ), ಆ) ಮತ್ತು ಇ) ಹೊಂಬೇಗೌಡ ನಗರದ ನಾಗರಾಜ ಗುಪ್ತ ಬಡಾವಣೆಯು ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವುದಿಲ್ಲ. ಆದುದರಿಂದ ಇಲ್ಲಿನ ಸಿ.ಎ. ನಿವೇಶನಗಳ ಬಗ್ಗೆ ಪ್ರಾಧಿಕಾರಕ್ಕೆ ಮಾಹಿತಿ ಇರುವುದಿಲ್ಲ.

ಬೆಂಗಳೂರಿನ ಗುರಪ್ಪನ ಪಾಳ್ಯದಲ್ಲಿ ನೀರಿನ ಹಣ ಪಾವತಿ ಮಾಡುವ ಕೌಂಟರ್ ತೆರೆಯುವುದು.

1831 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಗುರಪ್ಪಪಾಳ್ಯ ಹೊಸ ಗುರಪ್ಪನ ಪಾಳ್ಯ ಹಾಗೂ ಬಿಸ್ಮಿಲ್ಲಾನಗರದಲ್ಲಿರುವ ನೀರಿನ ಗ್ರಾಹಕರ ಸಂಖ್ಯೆ ಎಷ್ಟು?

ಆ) ಈ ಗ್ರಾಹಕರಿಗೆ ಅನುಕೂಲವಾಗಲು ಗುರಪ್ಪನ ಪಾಳ್ಯದಲ್ಲಿ ನೀರಿನ ಹಣ ಪಾವತಿ ಮಾಡಲು ಕೌಂಟರ್ ತೆರೆಯಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು) :

ಅ) ಗುರಪ್ಪನ ಪಾಳ್ಯದಲ್ಲಿ ನೀರಿನ ಗ್ರಾಹಕರ ಸಂಖ್ಯೆ	445
ಜಸ್ಮಿಲ್ಲಾ ನಗರದಲ್ಲಿ ನೀರಿನ ಗ್ರಾಹಕರ ಸಂಖ್ಯೆ	451
ಒಟ್ಟು :	**896**

ಆ) ಈಗಾಗಲೇ ಬಿ.ಟಿ.ಎಂ. ಬಡಾವಣೆಯಲ್ಲಿ ಹಣ ಪಾವತಿ ಮಾಡುವ ಕೇಂದ್ರ ಕೆಲಸ ನಿರ್ವಹಿಸುತ್ತಿದ್ದು, ಇದು ಕೇವಲ ಒಂದು ಕಿ.ಮೀ. ಅಂತರದಲ್ಲಿರುವುದರಿಂದ ಪ್ರತ್ಯೇಕವಾದ ಹಣ ಪಾವತಿ ಮಾಡುವ ಕೇಂದ್ರ ವನ್ನು ತಕ್ಷಣವೇ ತೆರೆಯಲು ಆಡಳಿತಾತ್ಮಕ ದೃಷ್ಟಿಯಿಂದ ಸೂಕ್ತವೆಂದು ಕಂಡು ಬಂದಿರುವುದಿಲ್ಲ. ಹಾಗೂ ಮೇಲ್ಕಂಡ ಪ್ರದೇಶದಲ್ಲಿ ಸಧ್ಯಕ್ಕೆ ಯಾವುದೇ ಜಲಮಂಡಳಿ ಕಟ್ಟಡಗಳು ಇರುವುದಿಲ್ಲ. ಗ್ರಾಹಕರ ಸಂಖ್ಯೆ ಸಾಕಷ್ಟು ಹೆಚ್ಚಾದ ನಂತರ ಗುರಪ್ಪನ ಪಾಳ್ಯದಲ್ಲಿ ಹಣ ಪಾವತಿ ಮಾಡುವ ಕೇಂದ್ರವನ್ನು ತೆರೆಯಲು ಪರಿಶೀಲಿಸಲಾಗುವುದು.

ಬೆಂಗಳೂರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಅಂಗಡಿಗಳು

1832 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಒಟ್ಟು ಅಂಗಡಿಗಳೆಷ್ಟು?

ಆ) ಇವುಗಳ ಪೈಕಿ ಎಷ್ಟು ಅಂಗಡಿಗಳು ಖಾಲಿ ಇವೆ?

ಇ) *ಇತ್ತೀಚೆಗೆ ರೈಲ್ವೇ ಕೌಂಟರ್ ಇದ್ದ ಮಳಿಗೆ ಖಾಲಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಈ) *ಈ ಮಳಿಗೆಯನ್ನು ಪ್ರಭಾವಿ ವ್ಯಕ್ತಿಯೊಬ್ಬರು ಹಂಚಿಕೆ ಮಾಡಿಸಿಕೊಳ್ಳಲು ಕ್ರಮ ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಈ ಮಳಿಗೆಯನ್ನು ಖಾದಿ ಭಂಡಾರ ತೆರೆಯಲು ಸರ್ಕಾರವು ಕ್ರಮಕೈಗೊಳ್ಳುವುದೆ?*

ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಈ ಸಂಕೀರ್ಣದಲ್ಲಿ ಮಳಿಗೆಗಳು ಮತ್ತು ಕಛೇರಿ ಸ್ಥಳಾವಕಾಶ ಸೇರಿ ಒಟ್ಟು 273 ಮಳಿಗೆಗಳು ಇವೆ.

ಆ) ಈ ಸಂಕೀರ್ಣದಲ್ಲಿನ ಟವರ್ ಬ್ಲಾಕ್ ಪೈಕಿ 7, 8 ಮತ್ತು 9 ಅಂತಸ್ತುಗಳು ಸಧ್ಯಕ್ಕೆ ಖಾಲಿ ಇವೆ.

ಇ) ರೈಲ್ವೇ ಇಲಾಖೆ ಇದನ್ನು ಖಾಲಿ ಮಾಡಿರುವುದಿಲ್ಲ.

ಈ) ಮತ್ತು

ಉ) 'ಇ' ನ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಜಯನಗರ ಕ್ಷೇತ್ರದ ಲಕ್ಕಸಂದ್ರದ ಕ್ವಾರಿಯ ಜಾಗದ ಸಂರಕ್ಷಣೆ

1833 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) *ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ಲಕ್ಕಸಂದ್ರದ ಕ್ವಾರಿಗೆ ಸೇರಿದ ಜಾಗವೆಷ್ಟು?*

ಆ) *ಈ ಜಾಗದಲ್ಲಿ ಜಂಟಿ ವಲಯದಲ್ಲಿ ಕೈಗೊಳ್ಳಲ್ಲಿರುವ ಯೋಜನೆಯನ್ನು ತಯಾರಿಸಲಾಗಿದೆಯೇ?*

ಇ) *ಹಾಗಿದ್ದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ?*

ಈ) *ಈ ಜಾಗವು ಒತ್ತುವರಿಯಾಗುತ್ತಿರುವುದು ನಿಜವಲ್ಲವೇ?*

ಉ) *ಹಾಗಿದ್ದಲ್ಲಿ ಈ ಜಾಗವನ್ನು ಸಂರಕ್ಷಿಸಲು ಸರ್ಕಾರ ತಡೆಗೋಡೆ ನಿರ್ಮಿಸುವ ಕ್ರಮ ಕೈಗೊಳ್ಳುತ್ತದೆಯೇ?*

ಶ್ರೀ ಅನಂತ್‌ನಾಗ್(ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) 10 ಎಕರೆ, 4 ಗುಂಟೆ.

ಆ) ಹೌದು.